ಹಣೆ ಬರಹ

ಒಳ್ಳೆಯದೇ ಬರೆದಿರಲಿ

ಉದಯ 06.08
ಅಸ್ತ 6.22

ಬುಧವಾರ 13.09.2017

ಹೇಮಲಂಬಿ, ದಕ್ಷಿಣಾಯನ. ವರ್ಷ ಋತು,ಭಾದ್ರಪದ ಮಾಸ, ಕೃಷ್ಣ ಪಕ್ಷ, ಅಷ್ಟಮಿ. ಬುಧವಾರ. ನಿತ್ಯ ನಕ್ಷತ್ರ- ರೋಹಿಣಿ, ಯೋಗ-ವಜ್ರ, ಕರಣ -ಬಾಲವ.

ರಾಹುಕಾಲ	ಗುಳಿಕಕಾಲ	ಯಮಗಂಡಕಾಲ
12.00-1.30	10.30-12.00	7.30- 09.00

ಮೇಷ ಗೆಳೆಯರ ಸಹಾಯ-ಸಹಕಾರದಿಂದ ಇಂದು ಮಹತ್ಕಾರ್ಯ ಸಾಧಿಸಲಿದ್ದೀರಿ. ಪ್ರೀತಿ ಪ್ರೇಮದ ಬಗ್ಗೆ ಎಚ್ಚರದಿಂದ ವರ್ತಿಸಿ. ಅತಿರೇಖತೆಯನ್ನ-ಅಸಹಜತೆಯನ್ನ ಉಂಟುಮಾಡುವ ಲಕ್ಷಣವಿದೆ.

ವೃಷಭ ಖಾಸಗಿ ಸಂಸ್ಥೆಯಿಂದ ಹಾಗೂ ಅವರ ಜತೆಗಿನ ವ್ಯವಹಾರವೂ ಗೌರವ ಮತ್ತು ಲಾಭವನ್ನ ಉಂಟು ಮಾಡಲಿದೆ. ಮೇಲಾಧಿಕಾರಿಗಳಿಂದ ಉದ್ಯೋಗದಲ್ಲಿ ಸ್ವಲ್ಪ ಕಿರಿ ಕಿರಿ ಅನುಭವಿಸುವ ಸಂಭವ.

ಮಿಥುನ ಖರ್ಚು ವೆಚ್ಚಗಳು ನಿಮ್ಮ ಲೆಕ್ಕ ತಪ್ಪುವ ಸಾಧ್ಯತೆ ಹೆಚ್ಚಿದೆ. ಕುಟುಂಬದ ಖರ್ಚಿಗಿಂತ ನಿಮ್ಮ ವೈಯಕ್ತಿಕ ಖರ್ಚು ಹೆಚ್ಚುವ ಸಾಧ್ಯತೆ. ಬಂಧು ಮಿತ್ರರ ಸಹಕಾರದಿಂದ ಕುಟುಂಬದಲ್ಲಿ ನೆಮ್ಮದಿ ಕಾಣಲಿದ್ದೀರಿ.

ಕಟಕ ಕೆಲವು ಪ್ರಮುಖ ಕಾರ್ಯಗಳು ನೆರವೇರಿ ಮನಸ್ಸು ನಿರಾಳತೆಯನ್ನ ಹೊಂದುವ ದಿನ. ರಾಜಕೀಯ ಧುರೀಣರ ಭೇಟಿಯಾಗುವ ಅವಕಾಶಗಳು ದೊರಕಿ ಸಮಾಜದಲ್ಲಿ ಗೌರವ ಹೊಂದಲಿದ್ದೀರಿ.

ಸಿಂಹ ವ್ಯವಹಾರದಲ್ಲಿ ನಿರೀಕ್ಷಿತ ಲಾಭವನ್ನ ಇಂದು ಹೊಂದಲಿದ್ದೀರಿ. ಕುಟುಂಬ ವರ್ಗದಲ್ಲಿ ನಿಮ್ಮ ಗೌರವವನ್ನು ಇಟ್ಟುಕೊಳ್ಳಬೇಕಾದರೆ ಸಹನಾವಂತರಾಗಿ ವರ್ತಿಸಬೇಕಾಗಿದೆ.

ಕನ್ಯಾ ಅಪವಾದವನ್ನ ಹೊರಿಸುವ ಸಾಧ್ಯತೆಗಳು ಇಂದು ಹೆಚ್ಚಿರುವುದರಿಂದ ನಿಮ್ಮ ವಿರೋಧಿಗಳಿಗೆ ನಿಮ್ಮ ತಪ್ಪುಗಳನ್ನು ತೋರಿಸುವ ಸಂಗತಿಗಳು ಉಂಟಾಗಬಹುದು. ತಟಸ್ಥ ನಿಲುವನ್ನು ಹೊಂದುವುದು ಲೇಸು.

ತುಲಾ ದೇಹಾರೋಗ್ಯದ ಬಗ್ಗೆ ಹೆಚ್ಚು ಗಮನ ನೀಡಬೇಕು. ಇಲ್ಲದಿದ್ದರೆ ಅತೀ ಆಯಾಸವೇ ಅನಾರೋಗ್ಯಕ್ಕೆ ಕಾರಣವಾಗಲಿದೆ. ಕೋಪಗೊಳ್ಳುವ ವರ್ತನೆಯೂ ಇಂದು ಹೆಚ್ಚಾಗಲಿದೆ.

ವೃಶ್ಚಿಕ ಶ್ರಮಕ್ಕೆ ತಕ್ಕದಾದ ಫಲಗಳು ದೊರಕದೇ ನಷ್ಟವನ್ನ ಹೊಂದುವ ಸಾಧ್ಯತೆ ಇದೆ. ದೇವ ಗುರುವಿನ ಧ್ಯಾನದಿಂದ ದಿನವನ್ನ ಪ್ರಾರಂಭಿಸಿ. ಮನೋಬಲವು ಹೆಚ್ಚಲಿದ್ದು ಎದುರಿಸುವ ಗುಣಗಳು ಬರಲಿದೆ.

ಧನು ಜವಾಬ್ದಾರಿಯಿಂದ ದುಡಿದರೂ ನಿಮಗೆ ಇಂದು ಲಾಭ ಗೌರವವು ಚ್ಯುತಿ. ಹೆದರದೇ ನಿಮ್ಮ ಕೆಲಸವನ್ನ ನಿಷ್ಠೆಯಿಂದ ಮಾಡಿ ಮುಗಿಸಿ. ಮುಂದೊಂದು ದಿನ ಶುಭ ಫಲ ಹೊಂದಲಿದ್ದೀರಿ.

ಮಕರ ಅನಾವಶ್ಯಕವಾಗಿ ನಿಮಗೆ ಇಂದು ಪರರಿಂದ ಕಿರಿಕಿರಿ ಉಂಟಾಗುವ ಸಾಧ್ಯತೆ. ಆದರಲ್ಲೂ ಉದ್ಯೋಗ ಕ್ಷೇತ್ರದಲ್ಲಿ ಮುನ್ನುಗ್ಗುವ ಪ್ರವೃತ್ತಿಯನ್ನ ಇಂದು ಬಿಡಿ. ಸಹಜವಾಗಿ ಇರುವುದನ್ನು ರೂಢಿಸಿಕೊಳ್ಳಿ.

ಕುಂಭ ಉದ್ಯೋಗಕ್ಷೇತ್ರದ ಜವಾಬ್ದಾರಿ ಮತ್ತು ಲಾಭವು ನಿಮ್ಮನ್ನಹುಡುಕಿಕೊಂಡು ಬರಲಿದೆ. ವಾಹನ ಖರೀದಿಯಲ್ಲೂ ಅದೃಷ್ಟವನ್ನ ಹೊಂದಲಿದ್ದೀರಿ. ಮನೋಭಾವದಲ್ಲಿ ಆತಂಕವನ್ನ ಹೊಂದುವ ಲಕ್ಷಣವಿದೆ.

ಮೀನ ಆಗು ಹೋಗುಗಳಿಗೆ ತಲೆ ಕೆಡಿಸಿಕೊಳ್ಳುವುದು ಬೇಡ. ದೇವರ ಮೇಲೆ ಭಾರ ಹಾಕಿ ನಿತ್ಯ ಕಾರ್ಯವನ್ನು ಪ್ರಾರಂಭಿಸಿ . ಶುಭತೆಯನ್ನ ಹೊಂದಲಿದ್ದೀರಿ. ಆತಂಕದ ಮನಸ್ಸನ್ನ ಬಿಟ್ಟುಬಿಡಿ.

ವಿ.ಡಿ.ಭಟ್ ಕರಸುಳ್ಳಿ (ಶಿರಸಿ) ದೂ: 9449360806

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ ಪರಿಸರ ಮನನ ಸಮಾವೇಶದಲ್ಲಿ ಪ್ರಮೋದ್ ಮಧ್ವರಾಜ್

ಪರಿಸರ ಸಂರಕ್ಷಣೆಯನ್ನು ಸವಾಲಾಗಿ ಸ್ವೀಕರಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

'ಪರಿಸರ ಸಂರಕ್ಷಣೆಯ ಕುರಿತು ಇಂದಿನ ವಿದ್ಯಾರ್ಥಿಗಳು ಹಾಗೂ ಯುವ ಸಮುದಾಯವು ಸವಾಲಾಗಿ ಸ್ವೀಕರಿಸಬೇಕು. ಪರಿಸರ ಪುನರ್ ನಿರ್ಮಾಣ ಮಾಡುವ ದೊಡ್ಡ ಕ್ರಾಂತಿ ನಡೆಯಬೇಕು' ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವ ಪ್ರಮೋದ್ ಮಧ್ವರಾಜ್ ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆಯ ವಿಭಾಗವು ಮಂಗಳವಾರ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿದ್ದ 'ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯೋಜನೆಯ ಪರಿಸರ ಮನನ ಹಾಗೂ ಯೂತ್ ರೆಡ್ ಕ್ರಾಸ್ ಸಂಯೋಜಕರ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಪರಿಸರದ ಬಗ್ಗೆ ಕಾಳಜಿ ವಹಿಸದಿದ್ದರೆ ದೊಡ್ಡ ಗಂಡಾಂತರಕ್ಕೆ ಮನುಕುಲ ಸಿಲುಕಲಿದೆ. ಮುಂದೆ ನೀರಿಗಾಗಿ ಹಾಹಾಕಾರ ಉಂಟಾಗುವ ಎಲ್ಲ ಲಕ್ಷಣಗಳೂ ಕಂಡು ಬರುತ್ತಿವೆ. ರಾಜ್ಯ, ಜಿಲ್ಲೆ, ತಾಲೂಕುಗಳ ನಡುವಣ ನೀರಿಗಾಗಿ ಯುದ್ಧ ನಡೆಯುವ ಸಂಭವ ಇದೆ. ಮಾನವನ ದುರಾಸೆಯಿಂದ ಪರಿಸರ ಹಾಳಾಗುತ್ತಿದೆ' ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಚಿವ ಪ್ರಮೋದ್ ಮಧ್ವರಾಜ್ 'ಪರಿಸರ ಮನನ' ಎಂಬ ಕಿರುಹೊತ್ತಿಗೆ ಬಿಡುಗಡೆ ಮಾಡಿದರು. ಬೆಂಗಳೂರು ವಿವಿ ಕುಲಸಚಿವ ಬಿ.ಕೆ.ರವಿ, ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ಭಾರತೀಯ ರೆಡ್‌ಕ್ರಾಸ್ ಸಭಾಪತಿ ಬಸ್ರೂರು ರಾಜೀವ ಶೆಟ್ಟಿ ಉಪಸ್ಥಿತರಿದ್ದರು.

'ವನಮಹೋತ್ಸವ ಆಚರಣೆ ಮಾಧ್ಯಮಗಳಲ್ಲಿ ಪ್ರಚಾರಕ್ಕಾಗಿ ಸೀಮಿತವಾಗಿದೆ ವಿನಃ ಪರಿಸರ ಸಂರಕ್ಷಣೆಗಲ್ಲ. ಸಂಘಟನೆಗಳು ಕಾಟಾಚಾರಕ್ಕೆ ಹಾಗೂ ಕಾಲಾಹರಣಕ್ಕೆ ಪರಿಸರ ರಕ್ಷಣೆ ಮಾಡಿ ಅಂತ ಧ್ವನಿ ಎತ್ತುತ್ತಿವೆ. ಸರಕಾರವು ಜನರನ್ನು ಸಂತೋಷಪಡಿಸುವ ಯೋಜನೆಗಳನ್ನು ರೂಪಿಸುತ್ತಿದ್ದು, ಇದರ ಜತೆಯಲ್ಲಿಯೇ ಪರಿಸರ ಸಂರಕ್ಷಣೆ ಮಾಡುವ ಹೆಚ್ಚು ಯೋಜನೆಗಳನ್ನು ಕೈಗೊಳ್ಳಬೇಕು. ಪರಿಸರ ಸಂರಕ್ಷಣೆಗಾಗಿ ರಾಷ್ಟ್ರೀಯ ಸೇವಾ ಯೋಜನೆಗೆ 13.65 ಕೋಟಿ ಬಜೆಟ್‌ನಲ್ಲಿ ಮಂಡಿಸಿದೆ. ಹಾಗಾಗಿ ಪರಿಸರ ರಕ್ಷಣೆ ಮಾಡುವ ಹೊಣೆಗಾರಿಕೆ ಸೇವಾ ಯೋಜನೆ ಮೇಲಿದೆ' ಎಂದು ವಿವರಿಸಿದರು.

'ಭೂತಾನ್ ದೇಶ ಪ್ರತಿ ವರ್ಷ ಶೇ.70 ರಷ್ಟು ಕಾರ್ಬನ್ ಡೈ ಆಕ್ಸೈಡ್ ಹೊರ ಹಾಕುತ್ತಿದೆ. ಇಲ್ಲಿ ನೆಲದ ಒಟ್ಟು ಹರವಿನಲ್ಲಿ ಶೇ.72 ರಷ್ಟು ಅರಣ್ಯ ಪ್ರದೇಶವಿದೆ. ಇಲ್ಲಿ ನದಿಗಳಲ್ಲಿ ಮೀನುಗಳನ್ನು ಹಿಡಿಯುವಂತಿಲ್ಲ. ಮರಳುಗಾರಿಕೆಗೆ ಅವಕಾಶವಿಲ್ಲ. ಒಂದು ಜೀವಂತ ಮರವನ್ನೂ ಕಡಿಯುವಂತಿಲ್ಲ. ಅಲ್ಲಿನ ಸರಕಾರ ಪರಿಸರ ಸಂರಕ್ಷಣೆಗಾಗಿ ಹೆಚ್ಚು ಒತ್ತು ನೀಡುತ್ತಿದೆ. ನಮ್ಮ ದೇಶಕ್ಕೆ ಸ್ವಂತಂತ್ರ ಬಂದಾಗ ಒಟ್ಟು ಭೂ ಪ್ರದೇಶದಲ್ಲಿ ಶೇ. 33ರಷ್ಟು ಅರಣ್ಯ ಪ್ರದೇಶವಿತ್ತು. ಇದರಲ್ಲಿ ಈಗ ಶೇ.7 ನಾಶವಾಗಿದೆ' ಎಂದು ಕಳವಳ ವ್ಯಕ್ತಿಪಡಿಸಿದರು.

> ಬೇಸಿಗೆ ಬಂದರೆ ರಾಜ್ಯದಲ್ಲಿ ನೀರಿಗಾಗಿ ಪರದಾಡುತ್ತಾರೆ. ಕೆರೆಗಳಂತೂ ಮರುಭೂಮಿಗಳಾಗುತ್ತಿವೆ. ರೈತರು ಬೆಳೆದ ಬೆಳೆಗಳಿಗೆ ಸಕಾಲಕ್ಕೆ ನೀರು ಲಭ್ಯವಾಗುತ್ತಿಲ್ಲ. ಇದಕ್ಕೆಲ್ಲ ಕಾರಣ ಪರಿಸರ ನಾಶ. ಮುಂದಿನ ಪೀಳಿಗೆಗೆ ಉಳಿವಿಗಾಗಿ ಪ್ರಕೃತಿ ಮತ್ತು ಪರಿಸರವನ್ನು ಉಳಿಸಬೇಕು.
>
> **-ಪ್ರಮೋದ್ ಮಧ್ವರಾಜ್** ಸಚಿವ

> ಪ್ರಕೃತಿ ಮತ್ತು ಪರಿಸರ ಉಳಿಸುವ ಬಗ್ಗೆ ವಿವಿಯ ಎನ್‌ಎಸ್‌ಎಸ್ ಘಟಕದಿಂದ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ವಿವಿಯ ಆವರಣದಲ್ಲಿ ಬಯೋಪಾರ್ಕ್ ಮತ್ತು 3.80 ಲಕ್ಷ ಗಿಡಗಳನ್ನು ನೆಡಲಾಗಿದೆ. ರಕ್ತದಾನ ಮತ್ತು ಅಂಗಾಂಗ ದಾನ ಕುರಿತು ಯುವ ಪೀಳಿಗೆಯು ಜನತೆಗೆ ಜಾಗೃತಿ ಮೂಡಿಸಬೇಕು.
>
> **-ಬಿ.ಕೆ.ರವಿ,** ಕುಲಸಚಿವ, ಬೆಂಗಳೂರು ವಿವಿ

ಪರಿಸರ ಅರಿವು

ಪಠ್ಯ ಪುಸ್ತಕ ಬರಲಿ!

ಶಾಲಾ ವಿದ್ಯಾರ್ಥಿಗಳಿಗೆ ಪರಿಸರದ ಕುರಿತು ಕಾಳಜಿ ಮೂಡಿಸುವ ಪಠ್ಯ ಪುಸ್ತಕಗಳನ್ನು ಹೊರ ತರುವಂತೆ ಸಂಸತ್ತಿನ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಬೇಕು. ಹಾಗೆಯೇ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕು' ಎಂದು ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್ ಅವರು ಪ್ರಮೋದ್ ಮಧ್ವರಾಜ್ ಅವರಲ್ಲಿ ವಿನಂತಿ ಮಾಡಿಕೊಂಡರು.

ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಮಾತನಾಡಿ, 'ಪರಿಸರ ಮತ್ತು ಮನುಕುಲಕ್ಕೆ ಅವಿನಾಭಾವ ಸಂಬಂಧ ವಿದೆ. ಪರಿಸರ ನಾಶವಾದರೆ ಮನುಕುಲ ನಾಶವಾ ದಂತೆ. ಪರಿಸರಕ್ಕೆ ಸಂಬಂಧಿಸಿದ ಹಕ್ಕಿ ಲೋಕ, ಕೀಟ ಲೋಕ, ಪುಷ್ಪಲೋಕ ಪರಾಗಸ್ಪರ್ಶಿ, ಜೇಡರಲೋಕದಂ ತಹ ಪ್ರದರ್ಶನ ನಡೆಸಲಾಗಿದೆ. ತೇಜಸ್ವಿ ಅವರ ಪರಿಸರ ಕಥಾ ಪ್ರಸಂಗಗಳ ಕುರಿತು ಪುಸ್ತಕಗಳ ಬಗ್ಗೆ ಪರಿಚಯಿಸಲಾಗುತ್ತಿದೆ' ಎಂದರು.

ಫಿನ್ಲೆಂಡ್ ರಾಯಭಾರಿ ಜತೆ ಸರಕಾರದ ಒಪ್ಪಂದ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಜ್ಞಾನ, ಸಂಶೋಧನೆ, ನಾವೀನ್ಯತೆ ಮತ್ತು ಕೌಶಲಾಭಿವೃದ್ಧಿ ಪರಿಣತಿ ಮಾಹಿತಿ ವಿನಿಮಯಕ್ಕಾಗಿ ರಾಜ್ಯ ಮಾಹಿತಿ ತಂತ್ರಜ್ಞಾನ ಇಲಾಖೆಯು ಫಿನ್ಲೆಂಡ್ ರಾಯಭಾರ ಕಚೇರಿ ಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ.

ಒಪ್ಪಂದದ ಕುರಿತು ಮಾತನಾಡಿದ ಮಾಹಿತಿ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯವು ಫಿನ್ಲೆಂಡ್ ಇನೋವೇಶನ್ ಕಾರಿಡಾರ್‌ನ ಹೊಸ ವಿಧಾನ ಮತ್ತು ಜ್ಞಾನ ಹಂಚಿಕೆಗೆ ಸಹಕಾರಿಯಾಗಲಿದೆ. ಎಕ್ಸ್‌ಪೋಶನ್ ವಿಸಿಟ್‌ಗಳನ್ನು, ಸ್ಟಾರ್ಟ್ಅಪ್‌ಗಳಿಗೆ ಉತ್ತೇಜನಗೊಳಿಸಲು ಪ್ರಯೋಜನವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಸ್ಟಾರ್ಟ್‌ಅಪ್ ಇನ್‌ಕ್ಯುಬೇಟರ್‌ಗಳು ಮತ್ತು ಆ್ಯಕ್ಸಲರೇಟರ್‌ಗಳ ಮಧ್ಯೆ ಸಹಭಾಗಿತ್ವ ಸಾಧಿಸುವುದೇ ನಮ್ಮ ಉದ್ದೇಶವಾಗಿದೆ. ರಾಜ್ಯದ ಐಟಿ ಬಿಟಿ ಕ್ಷೇತ್ರದ ಬೆಳವಣಿಗೆಗೆ ಪರಸ್ಪರ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.

ಫಿನ್ಲೆಂಡ್‌ನ ರಾಯಭಾರಿ ನೀನಾ ವಸ್ಕುನ್‌ಲಹತಿ ಮಾತನಾಡಿ, ಬೆಂಗಳೂರು ಟೆಕ್ ಸಮ್ಮೇಳನ, ಇಂಡಿಯಾ ನ್ಯಾನೋ ಮತ್ತು ನೋಕಿಯಾ ಇನೋವೇಶನ್ ಕಾರ್ಯಕ್ರಮಗಳನ್ನು ಜಂಟಿಯಾಗಿ ಆಯೋಜಿಸಲು ನಿರ್ಧರಿಸಲಾಗಿದೆ. ಉಭಯ ದೇಶಗಳ ಜನರ ಮಧ್ಯೆ ಸಂಪರ್ಕ ಹೆಚ್ಚಿಸಿ ಸಂಶೋಧನೆಗೆ ಪ್ರೋತ್ಸಾಹ ನೀಡಲಾಗುವುದು ಎಂದು ತಿಳಿಸಿದರು.

ಸ್ಟಾರ್ಟ್‌ಅಪ್, ಉದ್ಯಮ, ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ, ಶೈಕ್ಷಣಿಕ ತಜ್ಞರಿಗೆ ಹಾಗೂ ಹೂಡಿಕೆದಾರರಿಗೆ ಒಪ್ಪಂದ ಸಹಕಾರಿಯಾಗಲಿದೆ ಎಂದು ತಿಳಿಸಿದೆ.

ಪ್ರವಾಸೋದ್ಯಮ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಫಿನ್ಲೆಂಡ್‌ನ ರಾಯಭಾರಿ ನೀನಾ ವಸ್ಕುನ್‌ಲಹತಿ ಪರಸ್ಪರ ಒಪ್ಪಂದ ವಿನಿಮಯಮಾಡಿಕೊಂಡರು.

ಡಿಜಿಟಲೀಕರಣಕ್ಕೆ ಒತ್ತು ನೀಡಲು ಇನೊವೇಶನ್ ಲ್ಯಾಬ್ ಸ್ಥಾಪನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡಿಜಿಟಲ್ ಕ್ಷೇತ್ರಕ್ಕೆ ಒತ್ತು ನೀಡಲು ಬೆಂಗಳೂರು ಹಾಗೂ ಬೆಳಗಾವಿಯಲ್ಲಿ 'ಡಿಜಿಟಲ್ ಫ್ಯಾಕ್ಟರಿ ಇನೊವೇಶನ್ ಲ್ಯಾಬ್' ಸ್ಥಾಪಿಸುವುದಾಗಿ ಕ್ವೆಸ್ಟ್ ಗ್ಲೋಬಲ್ ಸಂಸ್ಥೆ ಘೋಷಿಸಿದೆ.

ಸುದ್ದಿಗೋಷ್ಠಿಯಲ್ಲಿ ಮುಖ್ಯ ಆಡಳಿತಾಧಿಕಾರಿ ಅಜಯ್ ಪ್ರಭು ಮಾತನಾಡಿ, ಉತ್ಪನ್ನಗಳ ಅಭಿವೃದ್ಧಿ ಹಾಗೂ ಉತ್ಪಾದನಾ ಎಂಜಿನಿಯರಿಂಗ್ ಸೇವೆಗಳನ್ನು ಕ್ವೆಸ್ಟ್ ಕಪನಿ ಯಶಸ್ವಿಯಾಗಿ ಪೂರೈಸುತ್ತಿದೆ. ಡಿಜಿಟಲ್ ಉತ್ಪಾದನಾ ವಲಯಗಳಿಗೆ ಮತ್ತು ಗ್ರಾಹಕರಿಗೆ ತಲುಪಿಸುವ ನಿಟ್ಟಿನಲ್ಲಿ ಸೀಮೆನ್ಸ್ ಸಾಫ್ಟ್‌ವೇರ್ ಇಂಡಿಯಾ ಕಂಪನಿಯೊಂದಿಗೆ ಒಡಂಬಡಿಕೆಗೆ ಚಿಂತನೆ ನಡೆಸಲಾಗಿದ್ದು, ಜಾಗತಿಕ ಉತ್ಪಾದಕರಿಗೆ ಡಿಜಿಟಲೀಕರಣಗೊಳಿಸಲು ಸಂಪೂರ್ಣ ಸಹಕಾರ ನೀಡಲಿದೆ ಎಂದರು.

ತಂತ್ರಜ್ಞಾನ, ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲು ನೂತನ ಯೋಜನೆಗಳಿಗೆ ಪ್ರೋತ್ಸಾಹ ನೀಡಲಾಗುವುದು. ಏರೋ ಎಂಜಿನ್, ಏರೋಸ್ಪೇಸ್, ಡಿಫೆನ್ಸ್, ಹೈ ಟೆಕ್ ಇಂಡಸ್ಟ್ರಿಯಲ್, ಮೆಡಿಕಲ್ ಡಿವೈಸಸ್, ಆಯಿಲ್, ಗ್ಯಾಸ್, ಸಾರಿಗೆ ಉದ್ಯಮಗಳೊಂದಿಗೆ ತಂತ್ರಜ್ಞಾನ ಹಾಗೂ ಸಾಫ್ಟ್‌ವೇರ್ ಪೂರೈಸಲು ಈಗಾಗಲೇ ಒಪ್ಪಂದ ಮಾಡಕೊಂಡಿದ್ದೇವೆ ಎಂದು ವಿವರಿಸಿದರು.

ಸೀಮೆನ್ಸ್ ಪಿಎಲ್ಎಂ ಸಾಫ್ಟ್‌ವೇರ್ ಇಂಡಿಯಾ ಇಂಡಿಯಾ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಸುಮನ್ ಬೋಸ್ ಮಾತನಾಡಿ, ಡಿಜಿಟಲ್ ತಯಾರಕ ಉತ್ಪಾದಕ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದು ಸಂತಸ ವಿಚಾರ. ಡಿಜಿಟಲ್ ಫ್ಯಾಕ್ಟರಿ ಇನೊವೇಶನ್ ಲ್ಯಾಬ್‌ಗಳಿಂದ ಜಾಗತಿಕ ಮಟ್ಟದಲ್ಲಿ ಉತ್ಪಾದನಾ ವಲಯಕ್ಕೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಎಲಿವೇಟರ್ ಪಾರ್ಕ್ ನಿರ್ಮಾಣ

ಬೆಂಗಳೂರು: ಎಲಿವೇಟರ್ ಪಾರ್ಕ್ ನಿರ್ಮಾಣಕ್ಕೆ ಸಹಾಯ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಅರಮನೆ ಮೈದಾನದಲ್ಲಿ ಇತ್ತೀಚೆಗೆ ನಡೆದ ಎಲಿವೇಟರ್ ಎಕ್ಸ್‌ಪೋ ಸಮಾರೋಪದಲ್ಲಿ ಮಾತನಾಡಿ, ರಾಜ್ಯದಲ್ಲಿ 500 ಕ್ಕೂ ಹೆಚ್ಚು ಎಲಿವೇಟರ್ ಉತ್ಪಾದಕರಿದ್ದು, ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ರಾಜ್ಯದಲ್ಲಿ ಪ್ರಥಮ ಬಾರಿಗೆ ಸಂಘ ಅಸ್ತಿತ್ವಕ್ಕೆ ಬಂದಿರುವುದು ಶ್ಲಾಘನೀಯ ಎಂದರು.

ಎಲಿವೇಟರ್ ನಿರ್ಮಾಣ ಕಂಪನಿಗಳು ರಾಜ್ಯದಲ್ಲಿ 100 ಕೋಟಿ ರು.ಗೂ ಹೆಚ್ಚು ಬಂಡವಾಳ ಹೂಡಲು ಮುಂದಾಗಿರುವುದು ಸ್ವಾಗತಾರ್ಹ. ಈ ಮೂಲಕ ರಾಜ್ಯ ದಲ್ಲಿ ಉದ್ಯೋಗವಕಾಶ ಹೆಚ್ಚಾಗುತ್ತವೆ. ಎಲಿವೇಟರ್ ನಿರ್ಮಾಣ ಕ್ಷೇತ್ರದಲ್ಲಿ ರಾಜ್ಯ ಹೆಚ್ಚಿನ ಸಾಧನೆ ಮಾಡುತ್ತಿದೆ. ಇದನ್ನು ಜನರ ಮುಂದಿಡಲು ರಾಜ್ಯದಲ್ಲಿ ಎಲಿವೇಟರ್ ಪಾರ್ಕ್‌ನ ಅಗತ್ಯವಿದೆ ಎಂದರು.

ನಿರ್ಮಲಾನಂದ ನಾಥ ಸ್ವಾಮೀಜಿ ಮಾತನಾಡಿ, ಟಾಟಾ ಬಿರ್ಲಾ ಸಹೋದರರ ಸಾಧನೆ ಶ್ಲಾಘನೀಯ. ಎಲಿವೇಟರ್‌ಗಳ ಮನುಷ್ಯನ ಮನಸ್ಸು ಕೂಡಾ ಎಲಿವೇಟರ್‌ಗಳಂತೆ ಎತ್ತರ ಹಾಗೂ ವೇಗವಾಗಿ ಸನ್ಮಾರ್ಗದತ್ತ ನಡೆಯುವಂತೆ ಆಗಲಿ ಎಂದು ಹಾರೈಸಿದರು.

ಸಂಘದ ಅಧ್ಯಕ್ಷೆ ಶೋಭಾ ಯದುರಾಜ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಲ್ಲಾ ಪ್ರಮುಖ ನಗರಗಳನ್ನು ಸ್ಮಾರ್ಟ್ ಸಿಟಿಗಳನ್ನಾಗಿ ಪರಿವರ್ತಿಸಿ ದೇಶ ಮುನ್ನಡೆಸಲು ಸಜ್ಜಾಗಿರುವ ಈ ಸಂದರ್ಭದಲ್ಲಿ ಎಲಿವೇಟರ್ಸ್ ವಲಯ ಮಾರುಕಟ್ಟೆ ಕೂಡಾ ಬಹಳ ದೊಡ್ಡದಾಗಿದೆ. ನಗರದ ಅಭಿವೃದ್ಧಿ, ಸ್ಮಾರ್ಟ್ ನಗರಗಳಂತಹ ಸರಕಾರಿ ಯೋಜನೆಗಳೂ ಲಿಫ್ಟ್ ಮಾರುಕಟ್ಟೆ ಅಭಿವೃದ್ಧಿಗೆ ಪೂರಕವಾಗಿದ್ದು ದೇಶದ ಬೇಡಿಕೆ ಪ್ರಪಂಚದಲ್ಲೇ ಎರಡನೇ ಸ್ಥಾನ ಪಡೆದಿವೆ. ಅದರಂತೆ ಬಹು ರಾಷ್ಟ್ರೀಯ ಕಂಪನಿಗಳು ಬೆಂಗಳೂರಿನಲ್ಲೇ 100 ಕೋಟಿ ರು.ಅಧಿಕ ಹೂಡಿಕೆ ಮೂಲಕ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುತ್ತಿದೆ ಎಂದರು. ನಿವೃತ್ತ ನ್ಯಾಯಮೂರ್ತಿ ಎಂ.ಎಸ್. ರಾಜೇಂದ್ರಪ್ರಸಾದ್, ಸಚಿವರಾದ ಕೆ.ಜೆ. ಜಾರ್ಜ್, ಎ.ಮಂಜು, ವಿಪ ಸದಸ್ಯರಾದ ಭೈರತಿ ಸುರೇಶ್, ಸಿ.ಎಂ. ಧನಂಜಯ, ಎಚ್.ಸಿ.ಶಿವರಾಮು, ಸಂಘದ ಪದಾಧಿಕಾರಿಗಳು ಇದ್ದರು.

ಸವಿತಾ ಸಮಾಜದ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯ



ನಗರದ ಟೌನ್‌ಹಾಲ್‌ನಲ್ಲಿ ನಡೆದ ಸವಿತಾ ಸಮಾಜದ ಸರ್ವ ಸದಸ್ಯರ ಸಭೆಯಲ್ಲಿ ರಾಜ್ಯಾಧ್ಯಕ್ಷ ಯು. ಕೃಷ್ಣಮೂರ್ತಿ, ಗೌರವಾಧ್ಯಕ್ಷ ಎಂ.ಸಿ. ವೇಣುಗೋಪಾಲ್ ಹಾಗೂ ಸದಸ್ಯರು ಭಾಗವಹಿಸಿದ್ದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸವಿತಾ ಸಮಾಜದ ಅಭಿವೃದ್ಧಿಗೆ ಪ್ರತ್ಯೇಕ ನಿಗಮವನ್ನು ಸ್ಥಾಪಿಸಲು ಒತ್ತಾಯಿಸಿ ಅಕ್ಟೋಬರ್ 17 ರಂದು ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಸವಿತಾ ಸಮಾಜದ ರಾಜ್ಯಾಧ್ಯಕ್ಷ ಯು. ಕೃಷ್ಣಮೂರ್ತಿ ಎಚ್ಚರಿಕೆ ನೀಡಿದ್ದಾರೆ.

ನಗರದ ಟೌನ್‌ಹಾಲ್‌ನಲ್ಲಿ ನಡೆದ ಸಮಾಜದ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿ, ಅನೇಕ ವರ್ಷಗಳಿಂದ ಕುಲಕಸುಬನ್ನು ನಿರ್ವಹಿಸುತ್ತಾ ಬರಲಾಗಿದೆ. ಅನೇಕರಿಂದ ಅವಮಾನಗಳನ್ನು ಸಮಾಜ ಎದುರಿಸುವಂತಾಗಿದೆ. ಆದರೂ ಸಹ ನಾವು ತಮ್ಮ ಕಾರ್ಯವನ್ನು ನಿಲ್ಲಿಸಿಲ್ಲ ಎಂದರು.

ಸವಿತಾ ಸಮಾಜ ಅಭಿವೃದ್ಧಿಗೆ ನಿಗಮದ ಸ್ಥಾಪನೆ ಅಗತ್ಯವಾಗಿದೆ. ಹಲವು ವರ್ಷಗಳಿಂದ ಹೋರಾಟ ನಡೆಸುತ್ತಾ ನಡೆಸುತ್ತಾ ಬಂದಿದ್ದು, ಭರವಸೆಗಳ ಮಹಾಪೂರ ಲಭಿಸಿತು ಬಿಟ್ಟರೆ ಅನುಷ್ಠಾನಕ್ಕೆ ಬರಲಿಲ್ಲ, ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕು. ನಮ್ಮ ಮನವಿಗೆ ಸ್ಪಂದಿಸದಿದ್ದಲ್ಲಿ ಉಗ್ರ ಹೋರಾಟವನ್ನು ನಡೆಸಲಾಗುವುದು ಎಂದರು.

ಸಮಾಜದ ಮಾಜಿ ಗೌರವಾಧ್ಯಕ್ಷ ಎಂ.ಸಿ. ವೇಣುಗೋಪಾಲ್ ಮಾತನಾಡಿ, ಕ್ಷೌರ ಮಾಡುವುದು ಜಾತಿಯ ವೃತ್ತಿಯಾಗಿ ಸ್ವರೂಪ ಪಡೆದುಕೊಂಡಿತ್ತು. ಆದರೆ ಇಂದು ಜಾತಿ ಸಂಕೋಲೆಯನ್ನು ಮೀರಿ, ಎಲ್ಲಾ ವರ್ಗದವರು ಈ ಕಾಯಕದಲ್ಲಿ ತೊಡಗಿದ್ದಾರೆ. ಇದರಿಂದ ನಮ್ಮ ಸಮಾಜದ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ ಎಂದು ತಿಳಿಸಿದರು.

ರಾಜ್ಯ ವ್ಯಾಪ್ತಿ ಸಂಘಟನೆ ಪ್ರತಿಭಟನೆ ನಡೆಸಲಿದ್ದು, ಎಲ್ಲಾ ಕ್ಷೌರಿಕ ಅಂಗಡಿಗಳನ್ನು ಬಂದ್ ಮಾಡಲಾಗುವುದು. ಇದೊಂದು ದೊಡ್ಡ ಪ್ರತಿಭಟನೆಯಾಗಿರುವುದರಿಂದ ಸರ್ಕಾರದ ಗಮನ ಸೆಳೆಯುವುದರಲ್ಲಿ ಯಾವುದೇ ಅನುಮಾನ ಇಲ್ಲ ವಿಶ್ವಾಸ ವ್ಯಕ್ತಪಡಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ಮತ್ತು ಕೈಗಾರಿಕಾ ವಸ್ತು ಸಂಗ್ರಹಾಲಯ ಸಿದ್ಧ

ಬಾಹ್ಯಾಕಾಶ ತಂತ್ರಜ್ಞಾನ ವೀಕ್ಷಣೆಗೆ ಶೀಘ್ರ ಲಭ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಾಹ್ಯಾಕಾಶ ತಂತ್ರಜ್ಞಾನ
अंतरिक्ष प्रौद्योगिकी
SPACE TECHNOLOGY

ಉದ್ಘಾಟನೆಗೆ ಸಿದ್ಧವಾಗಿರುವ ಬಾಹ್ಯಾಕಾಶ ತಂತ್ರಜ್ಞಾನಗಳ ಪ್ರದರ್ಶನ ಕೊಠಡಿ.

> ಬಾಹ್ಯಾಕಾಶ ತಂತ್ರಜ್ಞಾನಗಳನ್ನು ವೀಕ್ಷಿಸಲು ಬಯಸುವಱವರು 40 ರು. ಪ್ರವೇಶ ಶುಲ್ಕ ತೆರಬೇಕು. ಬಾಹ್ಯಾಕಾಶ ತಂತ್ರಜ್ಞಾನಗಳ ಜತೆಗೆ ವೈಜ್ಞಾನಿಕ ಪ್ರದರ್ಶನದ ವೀಕ್ಷಣೆಗೆ ಅವಕಾಶ ನೀಡಲಾಗಿದೆ. ಪ್ರತಿಯೊಬ್ಬರಲ್ಲೂ ವೈಜ್ಞಾನಿಕ ಚಿಂತನೆಯನ್ನು ಮೂಡಿಸುವ ದೃಷ್ಟಿಯಿಂದ ಈ ಪ್ರದರ್ಶನ ನಡೆಸಲಾಗುತ್ತಿದೆ.
>
> **- ಕುಮಾರ್**
> ವಿಶ್ವೇಶ್ವರಯ್ಯ ಮ್ಯೂಸಿಯಂನ ಗ್ರಂಥ ಪಾಲಕ

ವಿಶ್ವೇಶ್ವರಯ್ಯ ತಾಂತ್ರಿಕ ಮತ್ತು ಕೈಗಾರಿಕಾ ವಸ್ತು ಸಂಗ್ರಹಾಲಯದಲ್ಲಿ ಬಾಹ್ಯಾಕಾಶ ತಂತ್ರಜ್ಞಾನಗಳು ಪ್ರದರ್ಶನಕ್ಕೆ ಸಿದ್ಧಗೊಂಡಿದ್ದು, ಸೆಪ್ಟೆಂಬರ್‌ನೊಳಗೆ ಪ್ರದರ್ಶನ ವೀಕ್ಷಣೆಗೆ ಅವಕಾಶ ಸಿಗಲಿದೆ. ಬಾಹ್ಯಾಕಾಶ ತಂತ್ರಜ್ಞಾನಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಇರುವವರು ಇಲ್ಲಿ ಒಮ್ಮೆ ಬಂದು ನೋಡಿದರೆ ಸಾಕು ಎಲ್ಲವೂ ಕಣ್ಣಮುಂದೆ ಗೋಚರಿಸಲಿದೆ.

ಬಾಹ್ಯಾಕಾಶಕ್ಕೆ ಸಂಬಂಧಿಸಿದ ರೋಹಿಣಿ, ಆ್ಯಪಲ್, ಭಾಸ್ಕರ, ಇನ್ಸಾಟ್, ಜಿಎಸ್‌ಎಲ್‌ವಿ, ಧ್ರುವಗಾಮಿ ಮುಂತಾದ ರಾಕೆಟ್‌ಗಳು ಮತ್ತು ಉಪಗ್ರಹಗಳ ಉಡಾವಣೆ ಬಗ್ಗೆ ಮ್ಯೂಸಿಯಂನಲ್ಲಿ ಪ್ರದರ್ಶನಕ್ಕಿಡಲಾಗಿದೆ. ಎಚ್‌ಎಎಲ್ ವಾಯುಯಾನ ಮ್ಯೂಸಿಯಂನಂತೆ ಇಲ್ಲಿಯೂ ಎಲ್ಲ ರೀತಿಯಾದ ಬಾಹ್ಯಾಕಾಶ ತಂತ್ರಜ್ಞಾನಗಳು ಪ್ರದರ್ಶನಕ್ಕಿವೆ.

ಹಾಗೆಯೇ ಇಲ್ಲಿ ಬಾಹ್ಯಾಕಾಶ ತಂತ್ರಜ್ಞಾನಗಳ ಜತೆಗೆ ಬಾಹ್ಯಾಕಾಶ ಕ್ಷೇತ್ರಕೆ ಹಲವು ವಿಜ್ಞಾನಿಗಳ ಕೊಡುಗೆಗಳ ಬಗ್ಗೆ ತಿಳಿಯಬಹುದಾಗಿದೆ. ವಿದೇಶಗಳಲ್ಲಿ ಸಾಕಷ್ಟು ಜನ ಬಾಹ್ಯಾಕಾಶ ತಂತ್ರಜ್ಞಾನಗಳ ಬಗ್ಗೆ ತಿಳಿಯಲು ದುಡ್ಡು ಖರ್ಚು ಮಾಡುತ್ತಾರೆ. ಆದರೆ ಇಲ್ಲಿ ಕಡಿಮೆ ವೆಚ್ಚದಲ್ಲಿ ಬಾಹ್ಯಾಕಾಶ ಪ್ರದರ್ಶನಕ್ಕೆ ವೀಕ್ಷಣೆ ಅವಕಾಶ ನೀಡಿದ್ದಾರೆ.

ಪ್ರತಿಯೊಬ್ಬರೂ ಪ್ರದರ್ಶನದ ಬಗ್ಗೆ ಮಾಹಿತಿ ಪಡೆಯಬಹುದು. ಇದು ಕೇವಲ 45 ದಿನಗಳು ಮಾತ್ರ ಪ್ರದರ್ಶನವಿರುತ್ತದೆ. ಇದೊಂದು ಸುವರ್ಣ ಅವಕಾಶ ಎಂದು ವಿಶ್ವೇಶ್ವರಯ್ಯ ಮ್ಯೂಸಿಯಂನ ಗ್ರಂಥ ಪಾಲಕ ಕುಮಾರ್ ತಿಳಿಸಿದರು.

ನಿತ್ಯ 2 ಸಾವಿರಕ್ಕೂ ಹೆಚ್ಚು ಜನ ಪ್ರದರ್ಶನ ವೀಕ್ಷಣೆಗೆ ಬರುತ್ತಿದ್ದಾರೆ. ರಜೆ ದಿನಗಳಲ್ಲಂತೂ ಹೆಚ್ಚು ಸಾರ್ವಜನಿಕರು ವೀಕ್ಷಣೆಗೆ ಮಾಡಲು ಬರುಯತ್ತಾರೆ. ಇಲ್ಲಿ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಗುತ್ತಿದ್ದು, ವಿದ್ಯಾರ್ಥಿಗಳಿಗಂತೂ ವಿಜ್ಞಾನ ವಿಷಯಗಳ ಬಗ್ಗೆ ತಿಳಿದುಕೊಳ್ಳುವ ವೇದಿಕೆಯಾಗಿದೆ' ಎಂದರು.

'ಮ್ಯೂಸಿಯಂನಲ್ಲಿ ಈಗಾಗಲೇ ಹಲವು ಪ್ರದರ್ಶನಗಳು ನಡೆಯುತ್ತಿದ್ದು, ಅದರಲ್ಲಿ ಲೈಟಿಂಗ್ಸ್ , ಫಿಜಿಕ್ಸ್, ಕೆಮಿಸ್ಟ್ರಿ ಏರೋನಾಟಿಕ್ಸ್ , ರೈಟ್ ಸಹೋದರರ ವಿಮಾನ, ಡೈನೋಸಾರ್‌ಗಳು ಆಕರ್ಷಣೀಯವಾಗಿವೆ. ಎಂಜಿನ್ ಹಾಲ್ ಮತ್ತು ಫನ್‌ಸೈನ್ಸ್ ಗ್ಯಾಲರಿ ಇಲ್ಲಿ ವಿಶೇಷ. ಪ್ರತಿಯೊಂದು ತಂತ್ರಜ್ಞಾಗಳನ್ನು ಸ್ಪರ್ಶಿಸುವ ಅವಕಾಶ ಕಲ್ಪಿಸಲಾಗಿದೆ. ಮಕ್ಕಳಿಗಾಗಿಯೇ ಪ್ರತ್ಯೇಕವಾದ ವಿಭಾಗವಿದ್ದು, ಮಕ್ಕಳಲ್ಲಿ ಅಚ್ಚರಿಯನ್ನುಂಟು ಮಾಡಿ ಖುಷಿ ನೀಡುತ್ತದೆ.

ಲೈಟಿಂಗ್ಸ್ ಪ್ರದರ್ಶನ

ಸದ್ಯ ಈಗ ಲೈಟಿಂಗ್ಸ್ ಪ್ರದರ್ಶನ ನಡೆಯುತ್ತಿದೆ. ಇನ್ನು 4 ದಿನಗಳವರೆಗೆ ಈ ಪ್ರದರ್ಶನವಿದ್ದು, ಛಾಯೆ, ವಿನ್ಯಾಸ, ಪ್ರತಿಬಿಂಬವನ್ನು ಕಾಣಬಹುದಾಗಿದೆ. ಬೆಳಗ್ಗೆ 10 ರಿಂದ ಸಂಜೆ 5ರವರೆಗೆ ವೀಕ್ಷಿಸಬಹುದು.

ವಿಜ್ಞಾನ ಕುರಿತ ಹೊಸ ಪುಸ್ತಕಗಳು ಲಭ್ಯ!

ವಿಜ್ಞಾನ ಕ್ಷೇತ್ರಗಳಲ್ಲಾದ ಇತ್ತೀಚಿನ ಬೆಳವಣಿಗೆಗಳು ಮತ್ತು ಸಂಶೋಧನೆಯ ಕುರಿತು ಹಲವಾರು ಹೊಸ ಪುಸ್ತಕಗಳು ಇಲ್ಲಿ ಲಭ್ಯ. ವಿಜ್ಞಾನ ವಿಷಯ ಆಸಕ್ತರು ಪುಸ್ತಕಗಳನ್ನು ಅಧ್ಯಯನ ಮಾಡಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸಭೆ ಸಮಾರಂಭ

ಬ್ರಹ್ಮ ಸೂತ್ರ ಭಾಷ್ಯ ಕುರಿತ ಉಪನ್ಯಾಸ
ಸ್ಥಳ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಎ.ಪಿ.ಕೆ. ರಸ್ತೆ, ತ್ಯಾಗರಾಜನಗರ
ಸಮಯ: ಬೆಳಗ್ಗೆ 9.30ಕ್ಕೆ
ಆಯೋಜನೆ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ
ಉಪನ್ಯಾಸಕರು: ಪ್ರೊ.ಮಂಜುನಾಥ ಭಟ್ಟ

ಕನ್ನಡ ಚಿಂತನೆ-19 ಉಪನ್ಯಾಸ
ಸ್ಥಳ: ಭಾರತಿ ವೃಂದ ಸಂಸ್ಥೆ 9ನೆ ಅಡ್ಡರಸ್ತೆ, ಸಿಎಂಎಚ್ ರಸ್ತೆ
ಸಮಯ: ಸಂಜೆ 5.30ಕ್ಕೆ
ಉಪನ್ಯಾಸ: ಪ್ರೊ.ಶಾಂತರಾಜು
ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ

ವ್ಯಾಸತೀರ್ಥರ ನ್ಯಾಯಾಮೃತ ಕುರಿತು ಉಪನ್ಯಾಸ
ಸ್ಥಳ: ಸಾಂಸ್ಕೃತಿಕ ಮಂದಿರ, 9ನೇ ಬಡಾವಣೆ, ಜಯನಗರ
ಸಮಯ: ಸಂಜೆ 6.30ಕ್ಕೆ
ಆಯೋಜನೆ: ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್
ಉಪನ್ಯಾಸ: ವಿದ್ವಾನ್ ಮೈಸೂರು ರಾಮಚಂದ್ರಪ್ಪ

ಗರುಡ ಪುರಾಣ ಕುರಿತ ಉಪನ್ಯಾಸ
ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 5ನೇ ಬಡಾವಣೆ, ಜಯನಗರ
ಸಮಯ: ಸಂಜೆ 6.30ಕ್ಕೆ
ಆಯೋಜನೆ: ಶ್ರೀರಾಘವೇಂದ್ರ ಸ್ವಾಮಿಗಳ ಮಠ
ಪ್ರವಚನಕಾರ: ಅಶೋಕಾಚಾರ್ಯ

ಹರಿದಾಸ ಸಾಹಿತ್ಯ ಕುರಿತು ಉಪನ್ಯಾಸ
ಸ್ಥಳ: ಶ್ರೀರಾಘವೇಂದ್ರ ಸ್ವಾಮಿಗಳವರ ಮಠ, 10ನೇ ಮುಖ್ಯರಸ್ತೆಘಿ, 6ನೇ ಅಡ್ಡರಸ್ತೆ ಪ್ರಕಾಶನಗರ
ಸಮಯ: ಸಂಜೆ 7ಕ್ಕೆ
ಆಯೋಜನೆ: ಪವನ ಪರಿಮಳ ಪ್ರಸಾರಿಣೀ ಸಮಿತಿ
ಪ್ರವಚನಕಾರ: ಗುಲ್ಬರ್ಗ ಗುರುರಾಜದಾಸ

ಗರುಡ ಪುರಾಣ ಉಪನ್ಯಾಸ
ಸ್ಥಳ: ಶ್ರೀರಾಘವೇಂದ್ರ ಸ್ವಾಮಿಗಳವರ ಮಠ, 6ನೇ ಅಡ್ಡರಸ್ತೆ, ಅಮರಜ್ಯೋತಿನಗರ
ಸಮಯ: ಸಂಜೆ 7ಕ್ಕೆ
ಆಯೋಜನೆ: ಶ್ರೀಮದಾನಂದ ತೀರ್ಥ ಪ್ರವಚನ ಸಮಿತಿ
ಪ್ರವಚನಕಾರ: ರಾಮವಿಠಲಾಚಾರ್ಯ

ಕುಂಬೋಜಿರಾವ್ ಮತ್ತು ಪಿ.ಭುಜಂಗರಾವ್ ತಂಡದಿಂದ ಭಜನೆ
ಸ್ಥಳ: ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಸುಂಕದಕಟ್ಟೆ
ಸಮಯ: ಸಂಜೆ 6ಕ್ಕೆ
ಆಯೋಜನೆ: ತಿರುಪತಿ ತಿರುಮಲ ದೇವಸ್ಥಾನಗಳು ಹಿಂದೂ ಧರ್ಮಪ್ರಚಾರ ಪರಿಷತ್ತು

ಪುಸ್ತಕಗಳ ಲೋಕಾರ್ಪಣೆ
ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ
ಸಮಯ: ಸಂಜೆ 6ಕ್ಕೆ
ಆಯೋಜನೆ: ಸಮೃದ್ಧ ಸಾಹಿತ್ಯ

ಆಧುನಿಕ ಪೀಳಿಗೆಗೆ ತಳಿ ಅಭಿವೃದ್ಧಿ ಶಾಸ್ತ್ರ ಉದ್ಘಾಟನೆ
ಸ್ಥಳ: ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)
ಸಮಯ: ಬೆಳಗ್ಗೆ 9.30ಕ್ಕೆ
ಆಯೋಜನೆ: ಕೃಷಿ ವಿವಿ ಬೆಂಗಳೂರು ಮತ್ತು ಡುಂಪಾಟ್ ಪೈನೀರ್
ಅತಿಥಿ: ಡುಂಪಾಟ್ ಪೈನೀರ್‌ನ ದಕ್ಷಿಣ ಏಷ್ಯಾ ನಿರ್ದೇಶಕ ಡಾ.ಆನಂದ ಪಂಡರಾವಾಡ
ತೇಜಸ್ವಿ ಜೀವಲೋಕ-79

ಜೇಡಲೋಕ ಛಾಯಾಚಿತ್ರ ಪ್ರದರ್ಶನ
ಸ್ಥಳ: ಚಿತ್ರಕಲಾ ಪರಿಷತ್ **ಸಮಯ:** ಬೆಳಗ್ಗೆ 10ಕ್ಕೆ
ಆಯೋಜನೆ: ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ

23 ಐರಾವತ ಬಸ್‌ಗಳ ಲೋಕಾರ್ಪಣೆ ಹಾಗೂ ಸಾರಿಗೆ ಇಲಾಖೆಯ ಸಾಧನೆಗಳ ಕೈಪಿಡಿ ಲೋಕಾರ್ಪಣೆ
ಸ್ಥಳ: ವಿಧಾನ ಸೌಧ, ಗ್ರ್ಯಾಂಡ್ ಸ್ಟೆಪ್ಸ್ (ಹೈಕೋರ್ಟ್ ಮುಂಭಾಗ)
ಸಮಯ: ಬೆಳಿಗ್ಗೆ 10ಕ್ಕೆ
ಆಯೋಜನೆ: ಕರ್ನಾಟಕ ರಾಜ್ಯ ಸಾರಿಗೆ ನಿಗಮ
ಮುಖ್ಯ ಅತಿಥಿ: ಮುಖ್ಯಮಂತ್ರಿ ಸಿದ್ದರಾಮಯ್ಯ

ಜಿಎಸ್‌ಟಿ ಕುರಿತು ಕಾರ್ಯಾಗಾರ
ಮುಖ್ಯ ಅತಿಥಿ: ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಡಾ.ಅಜಯ್ ನಾಗ್ ಭೂಷನ್
ಸ್ಥಳ: ವಿವಿಎನ್ ಪದವಿ ಕಾಲೇಜು ಸಭಾಂಗಣ, ವಾಣಿ ವಿಲಾಸ್ ರಸ್ತೆ,, ವಿಶ್ವನಾಥಪುರ
ಸಮಯ: ಬೆಳಿಗ್ಗೆ 10ಕ್ಕೆ
ಆಯೋಜನೆ: ನಿರ್ವಹಣಾಶಾಸ್ತ್ರ ಅಧ್ಯಾಪಕರ ಪರಿಷತ್ತು

ಆರೋಗ್ಯ ತಪಾಸಣಾ ಶಿಬಿರ
ಸ್ಥಳ: ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು 13ನೇ ಅಡ್ಡ ರಸ್ತೆ ಮಲ್ಲೇಶ್ವರ
ಸಮಯ: ಬೆಳಿಗ್ಗೆ 10.30ಕ್ಕೆ
ಆಯೋಜನೆ: ಡಯಾಗ್ನೋಸ್ಟಿಕ್ಸ್

ಪ್ರಿಯದರ್ಶಿನಿ ಕಿವುಡು ಮಕ್ಕಳ ಪ್ರಾಥಮಿಕ ವಸತಿಯುತ ಶಾಲೆ ಉದ್ಘಾಟನಾ ಸಮಾರಂಭ
ಸ್ಥಳ: ನಾಗೇಹನಹಳ್ಳಿ ಕ್ರಾಸ್, ಮದರ್ ತೆರೇಸಾ ಲೇಔಟ್, ಆರ್ಮಿ ಕ್ಯಾಟರಿಂಗ್ ಮ್ಯಾನೇಜ್‌ಮೆಂಟ್ ಎದುರು ಹೆಣ್ಣೂರು, ಬಾಗಲೂರು ಮುಖ್ಯರಸ್ತೆ ಕಣ್ಣೂರು
ಸಮಯ: ಸಂಜೆ 4ಕ್ಕೆ
ಆಯೋಜನೆ: ಮುರುಗಪ್ಪನ್ ಎಜುಕೇಷನ್ ಟ್ರಸ್ಟ್
ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಅಭಿನಂದನಾ ಸಮಾರಂಭ
ಸ್ಥಳ: ನಗರ ಕೇಂದ್ರ ಗ್ರಂಥಾಲಯ ಸಭಾಂಗಣ ಪಶ್ಚಿಮ ವಲಯ ಹಂಪಿನಗರ
ಸಮಯ: ಸಂಜೆ 5ಕ್ಕೆ
ಆಯೋಜನೆ: ಕಾಳಿದಾಸ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಘ
ಅಭಿನಂದಿತರು: ಸಾರಿಗೆ ಸಚಿವ ಎಚ್.ಎಂ.ರೇವಣ್ಣ

ಓದುಗರ ಗಮನಕ್ಕೆ: ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ಕೃತಿ ಬಿಡುಗಡೆ, ಕಲಾ ಪ್ರದರ್ಶನ ಮತ್ತು ಇತರೆ ಸಮಾಜಮುಖಿ ಕಾರ್ಯಕ್ರಮಗಳ ಮಾಹಿತಿ ಮತ್ತು ವಿವರವನ್ನು ಮುಂಚಿತವಾಗಿ ಪತ್ರಿಕೆಗೆ ಕಳುಹಿಸಿ ಕೊಡಬಹುದು. ನಿಮ್ಮ ಕಾರ್ಯಕ್ರಮ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. **ನಮ್ಮ ವಿಳಾಸ:** ವಿಶ್ವವಾಣಿ ದಿನಪತ್ರಿಕೆ, ಎರಡನೇ ಮತ್ತು ಮೂರನೇ ಮಹಡಿ, ಧನುಷ್ ಪ್ಲಾಜಾ, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು- 560098, **ಇ-ಮೇಲ್ ವಿಳಾಸ:** vishvavaninews@gmail.com ಇಲ್ಲಿಗೆ ಕಳುಹಿಸಬಹುದು.